ಅಲೆಯಲ್ಲದೆ ಬೇರೆಯಲ್ಲ ಎಂಬ ನಿಷ್ಕರ್ಷೆಯು ಭೌತವಿಜ್ಞಾನದಲ್ಲಿ ವಿವಿಧ ಬಗೆಯ ಶಕ್ತಿಗಳ ಏಕರೂಪತೆಯನ್ನು ಕಂಡುಹಿಡಿಯುವಲ್ಲಿ ಮಹತ್ವದ ಪಾತ್ರವನ್ನು ವಹಿಸಿತು. ಆಧುನಿಕ ವಿಜ್ಞಾನದ ಅಧ್ವರ್ಯುವಾದ ಐನ್‌ಸ್ಟೈನ್ ಹೀಗೆ ಬರೆಯುತ್ತಾರೆ: "ನಮ್ಮ ಗುರಿಯೆಂದರೆ ಹಿಂದೆ ನಡೆದ ಎಲ್ಲ ಕ್ರಿಯೆಗಳನ್ನು ಮತ್ತು ಮುಂದೆ ನಡೆಯಬಹುದಾದ ಎಲ್ಲವನ್ನು ಕೂಡ ಒಂದೇ ನಿಯಮದ ಮೂಲಕ ವಿವರಿಸುವುದು..."

ಭವಿಷ್ಯಕಾಲದಲ್ಲಿ ವಿಜ್ಞಾನವು ಸಾಗುವ ದಿಶೆಯನ್ನು ಕುರಿತು ಸ್ವಾಮಿ ವಿವೇಕಾನಂದರು ನುಡಿದ ನುಡಿಗಳು ಇಂದು ಸತ್ಯವಾಗತೊಡಗಿವೆ. ಏಕಮೇವ ಸಮಗ್ರ ಶಕ್ತಿಯ ಅನ್ವೇಷಣೆಯಲ್ಲಿ ಭೌತವಿಜ್ಞಾನಿಗಳು ಇಂದು ತೊಡಗಿದ್ದಾರೆ. 'ಸರ್ವಾಂಗೀಣ ಸಿದ್ಧಾಂತ'ವೊಂದು (Theory of Everything) ಈ ವಿಶ್ವದ ಎಲ್ಲ ಘಟನೆಗಳನ್ನೂ ವಿವರಿಸಬಹುದೆಂದು ಅವರು ಈಗ ಭಾವಿಸತೊಡಗಿದ್ದಾರೆ. ಅದರಲ್ಲೂ ಸ್ಟೀಫನ್ ಹಾಕಿಂಗ್‌ನಂತಹ ಮಹಾನ್ ಭೌತವಿಜ್ಞಾನಿಯು ಅಂತಹದೊಂದು ಸಿದ್ಧಾಂತವು ಸೈದ್ಧಾಂತಿಕ ಭೌತವಿಜ್ಞಾನದ 'ಅಂತ್ಯ' ಕ್ಕೆ ಕಾರಣವಾಗಬಹುದೆಂದು ಅಭಿಪ್ರಾಯಪಡುತ್ತಾರೆ.

### ವಿಜ್ಞಾನ ಮತ್ತು ಯುಕ್ತಿಗಳ ಸೀಮಿತತೆ

ಸ್ವಾಮೀಜಿ ವಿಜ್ಞಾನದ ಸೀಮಿತ ಪರಿಧಿಯನ್ನು ಅರಿತಿದ್ದರು. ಆದರೆ ಧರ್ಮವು ವಿಜ್ಞಾನದ ಅಡಿಪಾಯವಾದ ಯುಕ್ತಿ ಅಥವಾ ತರ್ಕಕ್ಕೆ ಬದ್ಧವಾಗಿರಬೇಕು ಎಂದು ಅವರು ಆಶಿಸಿದ್ದರು. ಹಾಗೂ, ವಿಜ್ಞಾನಿಗಳೆಂದು ಕರೆಸಿಕೊಳ್ಳುವ ಅಧಿಕಾರಿಶಾಹಿ ಜನರು ವಿಜ್ಞಾನವು ಇದುವರೆಗೂ ಕಂಡುಹಿಡಿಯಲು ಸಾಧ್ಯವಾಗದೆ ಇರುವ ಚಿಂತನೆಗಳನ್ನು ಸಾರಾಸಗಟಾಗಿ ವಿವೇಚನೆಯಿಲ್ಲದೆ ತಿರಸ್ಕರಿಸಿದರೆ, ವಿಜ್ಞಾನ ಕೂಡ ಅವೈಚಾರಿಕವಾಗಬಲ್ಲುದು ಎಂಬ ಎಚ್ಚರಿಕೆಯನ್ನೂ ಅವರು ನೀಡುತ್ತಾರೆ. ವಿಜ್ಞಾನಿ ಎಂಬ ಪದಗ್ರಹಣದಿಂದ ಮಾತ್ರವೇ ಒಬ್ಬ ವ್ಯಕ್ತಿಯ ಅಭಿಪ್ರಾಯಗಳನ್ನು ಕುರುಡಾಗಿ ನಂಬುವುದನ್ನು ಅವರು ವಿರೋಧಿಸುತ್ತಾರೆ. ಈ ವಿಷಯದಲ್ಲಿ ಸ್ವಾಮಿ ವಿವೇಕಾನಂದರ ನುಡಿಗಳು ಇವು: "ಹಕ್ಸ್ಲಿ ಹೇಳಿದನೆಂದಾಕ್ಷಣ ಅವರು ಇದು ಸತ್ಯವಿರಲೇಬೇಕೆಂದು ನಂಬಿಬಿಡುತ್ತಾರೆ. ಧಾರ್ಮಿಕ ಕ್ಷೇತ್ರದಲ್ಲಿದ್ದ ಪ್ರಾಚೀನ ಪೋಪ್‌ಗಳ (ಧರ್ಮಾಧಿಕಾರಿಗಳು) ಸ್ಥಾನದಲ್ಲಿ, ಈ ಆಧುನಿಕ ಮೂಢನಂಬಿಕೆಗಳನ್ನು ಬಲಗೊಳಿಸಲು, ಅವರು ವಿಜ್ಞಾನದ ಆಧುನಿಕ ಪೋಪ್‌ಗಳನ್ನು ಪ್ರತಿಷ್ಠಾಪಿಸಿದ್ದಾರೆ... ಯಾವುದೇ ವೈಜ್ಞಾನಿಕ ಸಿದ್ಧಾಂತದ ವಿಷಯದಲ್ಲಿ ಕೂಡ, ಕುರುಡುನಂಬಿಕೆ ಇಲ್ಲದೆಯೇ (ಅದರ ಅಧ್ಯಯನವನ್ನು) ಆರಂಭಿಸಿರಿ."

### ವೇದಾಂತದ ಮೂಲಕ ಧರ್ಮ ಮತ್ತು ವಿಜ್ಞಾನಗಳ ಸಮನ್ವಯ


ವೇದಾಂತದ ಮೂಲಕ ವಿಜ್ಞಾನ ಮತ್ತು ಧರ್ಮಗಳ ನಡುವಣ ಸಾಮರಸ್ಯವನ್ನು ಸಾಧಿಸಬಹುದೆಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ವೇದಾಂತದ ವಿಶ್ವವ್ಯಾಪಕ ದೃಷ್ಟಿಕೋನವು ವಿಜ್ಞಾನದ ಅತ್ಯುನ್ನತ ಸಿದ್ಧಾಂತಗಳನ್ನು ಕೂಡ ತನ್ನ ತೆಕ್ಕೆಯಲ್ಲಿ ತೆಗೆದುಕೊಂಡಿದೆಯೆಂಬುದನ್ನು ತಮ್ಮ ಪ್ರವಚನಗಳಲ್ಲಿ ಸ್ವಾಮೀಜಿ ವಿವರಿಸುತ್ತ, ವೇದಾಂತದಲ್ಲಿ ಬರುವ ದೇವರ ಕಲ್ಪನೆ, ವಿಕಾಸವಾದಕ್ಕೆ ಅನುಗುಣವಾಗಿದೆ ಎಂದು ತೋರಿಸಿಕೊಡುತ್ತಾರೆ. ವಿಶ್ವಸಾರ್ವತ್ರಿಕವಾದ ಸುಪ್ತಶಕ್ತಿಯ ಕಲ್ಪನೆಯು ಪರಬ್ರಹ್ಮ ಸಿದ್ಧಾಂತದ ಮೂಲಕ, ವೇದಾಂತದಲ್ಲಿ ಅಭಿವ್ಯಕ್ತವಾಗಿದೆ. ಈ ಸುಪ್ತಶಕ್ತಿಯೇ ಪ್ರಪಂಚರೂಪವಾಗಿ ಪರಿಣಮಿಸಿ ರೂಪವೈವಿಧ್ಯವನ್ನು ಪಡೆದಿದೆ. ಸ್ವಾಮಿ ವಿವೇಕಾನಂದರ ಪ್ರಕಾರ ದೇವರು ಎಂದರೆ, **"ತನಗೆ ತಾನೇ ಅನಾವರಣಗೊಳ್ಳುವ ಸುಪ್ತ ವಿಶ್ವಸಾರ್ವತ್ರಿಕ ಚೈತನ್ಯಶಕ್ತಿ."** ಇಲ್ಲಿ ಶ್ರೇಷ್ಠ ದರ್ಜೆಯ ತತ್ತ್ವಶಾಸ್ತ್ರ ಮತ್ತು ವಿಜ್ಞಾನದ ಶಿಖರಪ್ರಾಯ ಚಿಂತನೆಗಳು ತಮ್ಮ ಸಮಾನಭೂಮಿಕೆಯನ್ನು ಕಂಡುಕೊಳ್ಳುವುದನ್ನು ಕಾಣಬಹುದು.

ವೈಜ್ಞಾನಿಕ ಶಿಕ್ಷಣ ಮತ್ತು ಸಂಶೋಧನೆಗಳು ಭಾರತದಲ್ಲಿ ವಿಸ್ತಾರಗೊಳ್ಳಬೇಕು ಎಂದು ಸ್ವಾಮೀಜಿ ಬಯಸಿದ್ದರು. ಅದಕ್ಕೆಂದೇ ಅವರು ಸರ್. ಜೆಮ್‌ಷೆಡ್‌ಜಿ ಟಾಟಾ ಅವರಿಗೆ ವೈಜ್ಞಾನಿಕ ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸುವಂತೆ ಪ್ರೇರಣೆ ನೀಡಿದರು. ಅದು ಈಗ ಬೆಂಗಳೂರಿನ 'ಭಾರತೀಯ ವಿಜ್ಞಾನ ಸಂಸ್ಥೆ'ಯ ರೂಪದಲ್ಲಿ ಕಾರ್ಯರೂಪಕ್ಕೆ ಬಂದಿದೆ. ಒಂದು ಸಂದರ್ಭದಲ್ಲಿ ಅವರು ಹೀಗೆ ಹೇಳುತ್ತಾರೆ: "ನಮಗಿಂದು ಬೇಕಾಗಿರುವುದು ಬ್ರಹ್ಮಚರ್ಯವೇ ಮಾರ್ಗದರ್ಶಕ ಧ್ಯೇಯವಾಗಿದ್ದು, ಶ್ರದ್ಧೆ ಅಥವಾ ಆತ್ಮವಿಶ್ವಾಸದಿಂದ ಕೂಡಿದ್ದು, ವೇದಾಂತದೊಂದಿಗೆ ಮಿಳಿತವಾದ ಪಾಶ್ಚಾತ್ಯ ವಿಜ್ಞಾನ."

### ಉಪಸಂಹಾರ

ವಿಜ್ಞಾನವಿರಲಿ, ಧರ್ಮವಿರಲಿ, ಸತ್ಯಾನ್ವೇಷಣೆಯೇ ಮಾನವ ಜೀವನದ ಪರಮಕರ್ತವ್ಯವೆಂದು ಸ್ವಾಮಿ ವಿವೇಕಾನಂದರು ಪರಿಗಣಿಸಿದ್ದರು. ಹೀಗಾಗಿ ಸತ್ಯಕ್ಕಾಗಿನ ಹಂಬಲ, ವೈಚಾರಿಕ ಅನ್ವೇಷಣೆ – ಇವುಗಳು ಎಲ್ಲಿ ಕಂಡುಬರುವವೋ ಅವುಗಳೆಲ್ಲ ಸ್ವೀಕಾರಾರ್ಹವೆಂದು ಅವರ ಅಭಿಪ್ರಾಯವಾಗಿತ್ತು. ಎಷ್ಟರಮಟ್ಟಿಗೆ ಧರ್ಮ ಮತ್ತು ವಿಜ್ಞಾನಗಳು ಈ ಆದರ್ಶವನ್ನು ಎತ್ತಿಹಿಡಿದು, ಉದಾತ್ತಮಾರ್ಗದಲ್ಲಿ ನಡೆಯುತ್ತವೆಯೋ, ಅಷ್ಟರಮಟ್ಟಿಗೆ ಅವು ನಮ್ಮ ಗೌರವಕ್ಕೆ ಪಾತ್ರವಾಗುತ್ತವೆ. ಯಾವಾಗ ಅವು ತಮ್ಮ ಮೂಲಭೂತ ಧ್ಯೇಯೋದ್ದೇಶಗಳನ್ನು ಮರೆತು, ಕುರುಡುನಂಬಿಕೆಗಳ ಕಂತೆಗಳಾಗುವವೋ ಆಗ ಅವು ಅಪ್ರಸ್ತುತವಾಗುತ್ತವೆ. ಇದು ಧರ್ಮದ ಬಗ್ಗೆ ಎಷ್ಟೋ ವಿಜ್ಞಾನದ ಮಟ್ಟಿಗೂ ಅಷ್ಟೇ ಸಮಂಜಸ. ಹೀಗಾಗಿ ಧರ್ಮ ಮತ್ತು ವಿಜ್ಞಾನಗಳೆರಡೂ ಐತಿಹಾಸಿಕವಾಗಿ ತಾವು ಬೆಳೆಸಿಕೊಂಡು ಬಂದಿರುವ ಪೂರ್ವಾಗ್ರಹಗಳನ್ನೂ ಅಪನಂಬಿಕೆಗಳನ್ನೂ ತ್ಯಜಿಸಬೇಕು; ತಮ್ಮ ಆಲೋಚನಾವಿಧಾನಗಳು ಮತ್ತು ಕಾರ್ಯಕ್ಷೇತ್ರಗಳು ಪರಸ್ಪರ ವೈರುಧ್ಯವಿಲ್ಲದೆ ಸಂಧಿಸಬಲ್ಲ ಸಮಾನಸ್ತರವೊಂದನ್ನು ಕಂಡುಕೊಳ್ಳಬೇಕು. ಧರ್ಮ ಮತ್ತು ವಿಜ್ಞಾನಗಳು ವಿಭಿನ್ನ ಮತ್ತು ವಿರೋಧಾಭಾಸದ ದಿಕ್ಕುಗಳತ್ತ ಮಾನವ ಜನಾಂಗವನ್ನು ಒಯ್ಯುತ್ತಿರುವುದು ಮಾನವ ಜನಾಂಗದಲ್ಲಿ ಬಹಳಷ್ಟು ನಕಾರಾತ್ಮಕ ಪ್ರಭಾವವನ್ನು ಉಂಟುಮಾಡಿವೆ. ಇದಕ್ಕೆ ಕಾರಣ ಇತಿಹಾಸದುದ್ದಕ್ಕೂ ಅವುಗಳ ನಡುವೆ ನಡೆದುಕೊಂಡು ಬಂದಿರುವ ನಿರಂತರ ಘರ್ಷಣೆ. ಇದರ ಸುಖಾಂತ್ಯವೇ ಮಾನವ ಜನಾಂಗದ ದುಃಖಾಂತ್ಯಕ್ಕೂ ನಾಂದಿಹಾಡಬಲ್ಲುದು. ಇದೇ ಸ್ವಾಮಿ ವಿವೇಕಾನಂದರ ಕನಸಾಗಿತ್ತು. ಇದನ್ನು ಸಾಧಿಸಬೇಕೆಂಬುದೇ ಅವರ ವೇದಾಂತಬೋಧನಾವಿಧಾನದ ಉದ್ದೇಶವೂ ಆಗಿತ್ತು. ★

# ಅನುಭಾವಿ ಆಲ್ಬರ್ಟ್ ಐನ್‌ಸ್ಟೈನ್



ಮೂಲ : ಸ್ವಾಮಿ ತಥಾಗತಾನಂದ

ಸಂಕ್ಷಿಪ್ತ ಭಾವಾನುವಾದ: ಶಂಸ ಐತಾಳ

ವಿಜ್ಞಾನ ಮತ್ತು ಅಧ್ಯಾತ್ಮಗಳ ಸಮನ್ವಯವಾಗಬೇಕು ಎಂದು ಸ್ವಾಮಿ ವಿವೇಕಾನಂದರು ಬಯಸಿದ್ದರು. ಅಂತಹ ಅಪೂರ್ವ ಸಂಗಮವನ್ನು ಐನ್‌ಸ್ಟೈನ್‌ರ ವ್ಯಕ್ತಿತ್ವದಲ್ಲಿ ಕಾಣುತ್ತೇವೆ. ಮಹಾನ್ ಮಾನವತಾವಾದಿ, ದಾರ್ಶನಿಕ ಮತ್ತು ವೈಜ್ಞಾನಿಕ ಜಗತ್ತಿನ ಅನಭಿಷಿಕ್ತ ಚಕ್ರವರ್ತಿಯಾಗಿದ್ದ ಇವರ ಬದುಕು ಮತ್ತು ಚಿಂತನೆಗಳನ್ನು ಅನುಭಾವಿಕ ದೃಷ್ಟಿಯಿಂದ ವಿಶ್ಲೇಷಿಸಿರುವ ಸ್ವಾಮೀಜಿಯವರು ನ್ಯೂಯಾರ್ಕಿನ ವೇದಾಂತ ಸೊಸೈಟಿಯ ಮುಖ್ಯಸ್ಥರು. ಅಪಾರ ಪಾಂಡಿತ್ಯವುಳ್ಳ ಇವರ ಹಲವಾರು ಕೃತಿಗಳು ಪ್ರಕಟವಾಗಿವೆ. ರಾಮಕೃಷ್ಣ ಮಹಾಸಂಘದ ಇಂಗ್ಲಿಷ್ ಪತ್ರಿಕೆ 'ಪ್ರಬುದ್ಧ ಭಾರತ' ದಲ್ಲಿ ಪ್ರಕಟವಾಗಿದ್ದ ಈ ಲೇಖನವನ್ನು ಸಂಕ್ಷೇಪಗೊಳಿಸಿ ಅನುವಾದಿಸಿದವರು ಕನ್ನಡದ ಹಿರಿಯ ಲೇಖಕರಾದ ಶಂಸ ಐತಾಳರು.

ವಿಜ್ಞಾನಿಗಳಲ್ಲಿಯೇ ಆಳವಾದ ಅನುಭವ ಮತ್ತು ಪ್ರಾಮಾಣಿಕತೆಗಳನ್ನು ಹೊಂದಿದ್ದ ಅಪೂರ್ವ ಹಾಗೂ ಏಕೈಕ ವ್ಯಕ್ತಿ ಆಲ್ಬರ್ಟ್ ಐನ್‌ಸ್ಟೈನ್. ಅವರದು ಋಜು ವ್ಯಕ್ತಿತ್ವ; ಅವರು ಖಂಡಿತವಾದಿ ಕೂಡ. ಜೀವನದುದ್ದಕ್ಕೂ ಸತ್ಯಾನ್ವೇಷಕರಾಗಿ ನಿಸರ್ಗದ ರಹಸ್ಯಗಳನ್ನು ಶೋಧಿಸಲು ಪ್ರಯಾಸಪೂರ್ವಕವಾಗಿ ಪ್ರಯತ್ನಿಸಿದ್ದ ಅವರು ಯಾವಾಗಲೂ ತಮಗೆ ತಾವೇ ಪ್ರಶ್ನೆಗಳನ್ನು ಕೇಳಿಕೊಂಡು ಅವುಗಳಿಗೆ ಉತ್ತರ ಹುಡುಕಲು ಪ್ರಯತ್ನಿಸುತ್ತಿದ್ದರು. ಅವರ ಸಂಶೋಧನೆಗಳು ಮತ್ತು ಪ್ರತಿಪಾದನೆಗಳು ವೈಜ್ಞಾನಿಕ ಕ್ಷೇತ್ರಕ್ಕಷ್ಟೇ ಅಲ್ಲ, ಎಲ್ಲ ಕ್ಷೇತ್ರಗಳಲ್ಲೂ ಮುಂದಿನ ಜನಾಂಗಕ್ಕೂ ಅಪೂರ್ವ ಕೊಡುಗೆಗಳೆನಿಸಿವೆ. ಅವರ ಸಂಶೋಧನೆಗಳಿಂದ, ನಿಸರ್ಗದ ಅನೇಕ ವಿದ್ಯಮಾನಗಳನ್ನು ನಾವೀಗ ಗೌರವಿಸುವಂತಾಗಿದೆ.

## ಐನ್‌ಸ್ಟೈನ್‌ರ ದೇವರು

ಬುದ್ಧಿಗೆ ಮೀರಿದ ತತ್ತ್ವಗಳನ್ನು ಆಧ್ಯಾತ್ಮಿಕ ಮನೋಭಾವದಿಂದ ಮಾತ್ರ ಗ್ರಹಿಸಲು ಸಾಧ್ಯ. ಐನ್‌ಸ್ಟೈನ್ ವಿಜ್ಞಾನಿಯಷ್ಟೇ ಆಗಿರದೆ, ಏಕಾಗ್ರತೆಯಲ್ಲಿ ಯಾವಾಗಲೂ ಚಿಂತನ–ಮಂಥನಗಳನ್ನು ನಡೆಸುವ ಯೋಗಿಯೂ ಆಗಿದ್ದರು. ಅವರಲ್ಲಿ ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಮನೋಭಾವಗಳೆರಡೂ ಮೇಳೈಸಿದ್ದವು. ಒಂದು ದೃಷ್ಟಿಯಲ್ಲಿ, ಅಂತಹ ಅಗಾಧ ಆಧ್ಯಾತ್ಮಿಕ ಮನೋಭಾವವೇ ಐನ್‌ಸ್ಟೈನ್‌ರ ಪರಿಪೂರ್ಣ ವ್ಯಕ್ತಿತ್ವದ ಜೀವಾಳವೂ ಆಗಿತ್ತು.

ವಿಶ್ವದ ಕಾರ್ಯಕಾರಣ ಸಂಬಂಧವನ್ನು ಕುರಿತು, ಅದರ ರಚನೆ ಹಾಗೂ ಸ್ವರೂಪಗಳ ಕುರಿತು ಅವರಿಗೆ ಬಾಲ್ಯದಿಂದಲೂ ಅತೀವ ಆಸಕ್ತಿ. ನಿಸರ್ಗದ ಪ್ರತಿಯೊಂದು ವಿದ್ಯಮಾನವನ್ನೂ ಕುತೂಹಲದಿಂದ ಕಾಣುತ್ತಿದ್ದ ಅವರಿಗೆ ವಿಶ್ವವು ಸುಂದರವಷ್ಟೇ ಅಲ್ಲದೆ, ರಹಸ್ಯಗರ್ಭಿತವೂ ಆಗಿತ್ತು. 'ವಿಶ್ವವು ದೇವರ ಸೃಷ್ಟಿ' ಎಂದೇ ಅವರು ನಂಬಿದ್ದರು. ಐನ್‌ಸ್ಟೈನ್ 'ದೇವರು', 'ದೇವರು' ಎಂದು ಪದೇ ಪದೇ ಉಚ್ಚರಿಸುತ್ತಿದ್ದರೂ, ಅವರು ನಾಸ್ತಿಕನೆಂದೇ ಸಹೋದ್ಯೋಗಿಗಳು ಭಾವಿಸಿದ್ದರು, ಏಕೆಂದರೆ ಅವರ 'ದೇವರು' ದೇವತಾಶಾಸ್ತ್ರದಲ್ಲಿ ಪ್ರತಿಪಾದಿತವಾಗಿದ್ದ ದೇವರಾಗಿರಲಿಲ್ಲ; ಅನುಭವಾತೀತವಾದ ಅಖಂಡತೆಗೆ ದೇವರು ಒಬ್ಬ ರೂಪಕವಾಗಿದ್ದ, ಅಷ್ಟೇ! ಐನ್‌ಸ್ಟೈನ್‌ರ 'ದೇವರು' ನಿರಾಕಾರ ದೇವನಾಗಿದ್ದು, ಆತನ ಸಾಮರ್ಥ್ಯ ಇಡೀ ವಿಶ್ವವನ್ನೇ ವ್ಯಾಪಿಸಿತ್ತು. ಹೀಗೆ ಐನ್‌ಸ್ಟೈನ್‌ರ 'ದೇವರು' ವಿಶ್ವದ ಕಾರ್ಯಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಡೆಸುವ ನಿಯಮಗಳಲ್ಲಿ ಒಂದು ಶಕ್ತಿಯ ರೂಪವಾಗಿ ಮಾತ್ರ ಕಂಡುಬರುತ್ತಿದ್ದ.

ವಿಶ್ವಧಾರ್ಮಿಕಪ್ರಜ್ಞೆಯನ್ನು ಕುರಿತಂತೆ ತಮಗಿರುವ ಭಾವನೆಗಳನ್ನು ಆಗಾಗ ಐನ್‌ಸ್ಟೈನ್ ವ್ಯಕ್ತಪಡಿಸಿದ್ದಾರೆ. ವಿಶ್ವ ಹಾಗೂ ದೇವರು ಬೇರೆಬೇರೆಯಲ್ಲ; ದೇಹ ಮತ್ತು ಆತ್ಮಗಳಂತೆ ಇವೆರಡೂ ಒಂದೇ. ಹೀಗೆ ಪ್ರತಿಪಾದಿಸಿದ ಸ್ಪಿನೋಜ (೧೬೩೨–೭೭) ತನ್ನ ಗುರುವೆಂದು ಐನ್‌ಸ್ಟೈನ್ ಹೇಳಿಕೊಂಡಿದ್ದಾರೆ. ಸ್ಪಿನೋಜ ಹದಿನೇಳನೆಯ ಶತಮಾನದಲ್ಲಿ ಬದುಕಿದ್ದ ಪ್ರಮುಖ ತತ್ತ್ವಶಾಸ್ತ್ರಜ್ಞ ಹಾಗೂ ಅನುಭಾವಿ. ಐನ್‌ಸ್ಟೈನ್‌ರ ಪ್ರಕಾರ, ಅವನ ವಿಶ್ವದೇವೈಕ್ಯವಾದ ಅತ್ಯಂತ ಶ್ರೇಷ್ಠಮಟ್ಟದ್ದು.

ಸ್ಪಿನೋಜನ ಪ್ರಭಾವದಿಂದಾಗಿ, ಅವನಂತೆ ಐನ್‌ಸ್ಟೈನ್ ಕೂಡ ಏಕಾಂತತೆಗೆ ಮಾರುಹೋದರು. ಜೀವನದ ಉದ್ದೇಶಗಳನ್ನು ಕುರಿತಂತೆ, ಅವನಂತೆಯೇ, ಉನ್ನತ ಚಿಂತನೆಗಳನ್ನು ನಡೆಸ ತೊಡಗಿದರು. ಐನ್‌ಸ್ಟೈನ್‌ರ ಪ್ರತಿಪಾದನೆಗಳು ಆಧುನಿಕ ಚಿಂತನಧಾರೆಗೆ ಅವರು ನೀಡಿದ ಅತ್ಯುತ್ಕೃಷ್ಟ ಕೊಡುಗೆಗಳಾಗಿವೆ. ಸ್ಪಿನೋಜನಂತೆ ಅವರೂ ನಿರಾಕಾರ ಪರಮಾತ್ಮನ ಅಸ್ತಿತ್ವದಲ್ಲಿ ಗಾಢ ವಿಶ್ವಾಸವನ್ನು ಇರಿಸಿಕೊಂಡಿದ್ದರು. ದೇವರ ಶಕ್ತಿಸಾಮರ್ಥ್ಯಗಳು ನಿಸರ್ಗದ ಪ್ರತಿಯೊಂದು ವಿದ್ಯಮಾನಗಳಲ್ಲಿಯೂ ಕಂಡುಬರುತ್ತವೆ ಎಂದು ಐನ್‌ಸ್ಟೈನ್ ಭಾವಿಸಿದ್ದರು.

### ನಿಗೂಢತೆಯತ್ತ ಅಚ್ಚರಿ

ನಾಲ್ಕೈದು ವರ್ಷ ಪ್ರಾಯದ ಬಾಲಕನಾಗಿದ್ದಾಗ ಐನ್‌ಸ್ಟೈನ್ ಒಮ್ಮೆ ಕಾಯಿಲೆಬಿದ್ದು ಮಲಗಿದ್ದ. ಅವನ ತಂದೆ ಆಟವಾಡಲೆಂದು ಒಂದು ದಿಕ್ಸೂಚಿಯನ್ನು ಅವನಿಗೆ ಕೊಟ್ಟಿದ್ದರು. ಆದರೆ ಅದು ಅವನ ಪಾಲಿಗೆ ಆಟಿಕೆಯಷ್ಟೇ ಆಗಿರದೆ, ಒಂದು ನಿಗೂಢ ಹಾಗೂ ಅದ್ಭುತ ವಸ್ತುವೆನಿಸಿತ್ತು. ದಿಕ್ಸೂಚಿಯ ಪ್ರತಿಯೊಂದು ಭಾಗವನ್ನೂ ಬಿಚ್ಚಿ ಪರೀಕ್ಷಿಸಿ, ಅದರ ಕಾರ್ಯವಿಧಾನವನ್ನು ತಿಳಿದುಕೊಳ್ಳಲು ಅವನು ಪ್ರಯತ್ನಿಸಿದ್ದ. "ಬಾಲ್ಯದ ಈ ಅನುಭವವು ನನ್ನ ಮೇಲೆ ಗಾಢ ಪ್ರಭಾವವನ್ನು ಬೀರಿತು. ಎಲ್ಲ ಬಿಡಿ ವಸ್ತುಗಳ ಹಿಂದೆ ಪವಾಡದಂತೆ ಕಂಡುಬರುವ ರಹಸ್ಯಗರ್ಭಿತವಾದ ವಿಷಯ ಅಡಗಿರುತ್ತದೆ" ಎಂದು ನೆನಪಿಸಿಕೊಂಡಿದ್ದಾರೆ ಐನ್‌ಸ್ಟೈನ್. ಪ್ರತಿಯೊಂದು ವಸ್ತುವೂ ಅವರ ಕುತೂಹಲವನ್ನು ಕೆರಳಿಸುತ್ತಿತ್ತು, ಅವರ ಒಳ ಅರಿವನ್ನೂ ಕಲ್ಪನಾ ಸಾಮರ್ಥ್ಯವನ್ನೂ ವಿಸ್ತರಿಸುತ್ತಿತ್ತು. ಹೀಗೆ ಕುತೂಹಲವೇ ಐನ್‌ಸ್ಟೈನರ ವಿಶೇಷ ಸ್ವಭಾವವಾಗಿತ್ತು. ದಿಕ್ಸೂಚಿಯ ಬಿಡಿ ಭಾಗಗಳನ್ನು ಬಿಚ್ಚಿ ಪರೀಕ್ಷಿಸಿದ ಬಾಲ್ಯದ ಅನುಭವವೇ ಮುಂದೆ ಅವರ ಐಕ್ಯಕ್ಷೇತ್ರ ಸಿದ್ಧಾಂತಕ್ಕೆ (Unified Field Theory) ನಾಂದಿಯಾಯಿತು.

ವಿಜ್ಞಾನದಲ್ಲಿ ಕಂಡುಬರದಂತಹ ಇಂದ್ರಿಯಾತೀತ ಪ್ರಪಂಚದ ಬಗ್ಗೆ ತಮಗೆ ಬಾಲ್ಯದಲ್ಲಿದ್ದ ಆಸಕ್ತಿ, ಕುತೂಹಲಗಳನ್ನು ಬದುಕಿನ ಕೊನೆಯವರೆಗೂ ಐನ್‌ಸ್ಟೈನ್ ಉಳಿಸಿಕೊಂಡುಬಂದರು. ಅವರ ಜೀವನಚರಿತ್ರಕಾರನೊಬ್ಬ ಹೇಳಿದಂತೆ, "ಮಾನವ ಸಂಬಂಧಗಳಲ್ಲಿ ಸ್ವಾತಂತ್ರ್ಯ–ಸುರಕ್ಷತೆಗಳೆರಡನ್ನೂ ಪಡೆಯದ, ಹಾಗೂ ಅವುಗಳನ್ನು ಧರ್ಮದಲ್ಲಿ ಕಾಣಲು ವಿಫಲನಾದ ಬಾಲಕ, ವಿಜ್ಞಾನದಲ್ಲಿ ಅವುಗಳನ್ನು ಹುಡುಕತೊಡಗಿದ."

ಇಡೀ ವಿಶ್ವವೇ ಐನ್‌ಸ್ಟೈನ್‌ರ ದೃಷ್ಟಿಯಲ್ಲಿ ಒಂದು ಪವಾಡವಾಗಿತ್ತು, ಅದ್ಭುತವಾಗಿತ್ತು. ವಿಶ್ವದ ಸಹಜ ಭೌತಿಕ ನಿಯಮಗಳು ಅವರಿಗೆ ಗಹನವೂ ಗಭೀರವೂ ಆದ ಸಮಸ್ಯೆಗಳಾಗಿದ್ದವು. ನಿಸರ್ಗದ ಬಗ್ಗೆ ಅವರು ಪೂಜ್ಯಭಾವನೆಯನ್ನು ಹೊಂದಿದ್ದರು. ಆದರೂ ನೈಸರ್ಗಿಕ ರಹಸ್ಯಗಳು ಅವರಿಗೆ ಕ್ಲಿಷ್ಟ ಸವಾಲುಗಳೆನಿಸಿದ್ದವು. ಹೀಗೆ ನೈಸರ್ಗಿಕ ವಿದ್ಯಮಾನಗಳನ್ನು ಕುರಿತಂತೆ, ಚಿಂತನ ಮಂಥನಗಳನ್ನು ನಡೆಸುತ್ತಲೇ ಅವರು ಬೆಳೆದರು. ವಿಶ್ವದ ನಿಯಮಗಳ ಬಗ್ಗೆ ಮನಸ್ಸನ್ನು ಕೇಂದ್ರೀಕರಿಸಿ, ಚಿಂತಿಸುವ ಕಲೆಯಲ್ಲಿ ಐನ್‌ಸ್ಟೈನ್ ಕ್ರಮೇಣ ನಿಷ್ಣಾತರಾದರು.

> **"ಈ ಸಾಪೇಕ್ಷತಾ ಸಿದ್ಧಾಂತವನ್ನು ಬೇರೆ ಯಾರೂ ಅಲ್ಲದೆ, ನಾನೇ ಏಕೆ ಅನ್ವೇಷಿಸಿದೆ ಎಂಬ ಪ್ರಶ್ನೆಯನ್ನು ನನಗೆ ನಾನೇ ಕೇಳಿಕೊಂಡಾಗ, ಅದಕ್ಕೆ ಈ ಕೆಳಗೆ ಕಾಣಿಸಿದ ಸನ್ನಿವೇಶವೇ ಕಾರಣವೆಂದು ನನಗೆ ಅನಿಸುತ್ತದೆ. ದೇಶ–ಕಾಲ ಸಮಸ್ಯೆಗಳ ಬಗ್ಗೆ ವಯಸ್ಕರು ಸಾಮಾನ್ಯವಾಗಿ ಹೆಚ್ಚು ಚಿಂತಿಸುವುದಿಲ್ಲ; ಕುತೂಹಲ ತಾಳುವುದಿಲ್ಲ. ಬಾಲ್ಯದ ಕುತೂಹಲವು ಅವರಲ್ಲಿ ಮಾಯವಾಗಿರುತ್ತದೆ. ಆದರೆ ನಾನು ಕುತೂಹಲ ಪ್ರವೃತ್ತಿಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದೆ. ಆದುದರಿಂದ ಸಾಮಾನ್ಯ ಮಗುವಿಗಿಂತ ಹೆಚ್ಚು ಆಳವಾಗಿ, ಗಂಭೀರವಾಗಿ ಸಮಸ್ಯೆಗಳ ಒಳಹೊಕ್ಕು ಶೋಧಿಸಲು ನನಗೆ ಸಾಧ್ಯವಾಯಿತು." – ಐನ್‌ಸ್ಟೈನ್**
>
> (ನೋಬೆಲ್ ಪ್ರಶಸ್ತಿ ಪುರಸ್ಕೃತನಾದ ಒಬ್ಬ ಸ್ನೇಹಿತನಿಗೆ ಬರೆದ ಪತ್ರದಿಂದ)

### ಜೀವನದ ಉದ್ದೇಶ

ಐನ್‌ಸ್ಟೈನರ ಅಭಿಪ್ರಾಯದಲ್ಲಿ ಬದುಕು ಅತ್ಯಂತ ಮಹತ್ವದ್ದಾಗಿತ್ತು. ಸೃಷ್ಟಿಯ ಉದ್ದೇಶವೇ ರಹಸ್ಯಗರ್ಭಿತ ಎಂದು ಅವರು ಭಾವಿಸಿದ್ದರು. ವಿಶ್ವದ ರಚನೆ ಹಾಗೂ ಸ್ವರೂಪಗಳ ಬಗ್ಗೆ ಹೆಚ್ಚು ಹೆಚ್ಚು ಚಿಂತಿಸುತ್ತ, ವಿಮರ್ಶಿಸುತ್ತ ಹೋದಂತೆ, 'ದೇವರು' ಎಂದು ಸಾಮಾನ್ಯವಾಗಿ ಕರೆಯಲಾಗುವ ಸರ್ವವ್ಯಾಪಿ ಪ್ರಜ್ಞೆ ಅಥವಾ ಬುದ್ಧಿಶಕ್ತಿಗೆ ಸಂಬಂಧಿಸಿದ ವಿಶೇಷ ಸವಾಲುಗಳು ಅವರಿಗೆ ಎದುರಾಗತೊಡಗಿದವು. "ಏಸುಕ್ರಿಸ್ತನು ಐತಿಹಾಸಿಕ ವ್ಯಕ್ತಿಯೇ?" ಎಂದು ಯಾರೋ ಒಬ್ಬರು ಪ್ರಶ್ನಿಸಿದಾಗ ಅವರು ಕೂಡಲೇ ಹೀಗೆ ಉತ್ತರಿಸಿದ್ದರು: "ನಿಸ್ಸಂದೇಹವಾಗಿ. ಏಸುಕ್ರಿಸ್ತನೆಂಬ ವ್ಯಕ್ತಿ ವಾಸ್ತವವಾಗಿ ಇದ್ದ ಎಂಬ ನಂಬಿಕೆಯಿಲ್ಲದ ಯಾವೊಬ್ಬ ವ್ಯಕ್ತಿಯೂ ಅವನ ಸುವಾರ್ತೆಗಳನ್ನು ಅರ್ಥಮಾಡಿಕೊಳ್ಳಲಾರ....... ಏಸುಕ್ರಿಸ್ತನಂಥ ಮಹಾವ್ಯಕ್ತಿಯನ್ನು ಕಾಲ್ಪನಿಕವಾಗಿ ಪುರಾಣಕಥೆಗಳಲ್ಲಿ ಸೃಷ್ಟಿಸಲು ಯಾರಿಗೂ ಸಾಧ್ಯವಿಲ್ಲ."

ಜೀವನದ ವಿಶೇಷ ಉದ್ದೇಶವನ್ನು ಸ್ಪಷ್ಟವಾಗಿ ತಿಳಿಯ ಬೇಕಾದರೆ, ಧಾರ್ಮಿಕ ಮನೋಭಾವ ಮತ್ತು ಆಧ್ಯಾತ್ಮಿಕ ಒಲವುಗಳನ್ನು ಹೊಂದಿರಬೇಕು ಎನ್ನುತ್ತಾರೆ ಐನ್‌ಸ್ಟೈನ್. ಅವರ ಅಭಿಪ್ರಾಯದಲ್ಲಿ ಮಾನವನೊಬ್ಬನ ಜೀವನದ ನಿಜವಾದ ಮೌಲ್ಯವು, ಅವನು ದುರಹಂಕಾರದಿಂದ ಹೇಗೆ ಬಿಡುಗಡೆ ಹೊಂದಿದನೆಂಬುದರಿಂದಲೇ ನಿರ್ಧಾರವಾಗುತ್ತದೆ. ದುರ್ಗುಣಗಳ ಮೇಲೆ ನಿಯಂತ್ರಣ ಸಾಧಿಸಿದ ಬಳಿಕವೇ ವ್ಯಕ್ತಿ ಆಂತರಿಕ ಆಧ್ಯಾತ್ಮಿಕ ವಿಕಾಸವನ್ನು ಹೊಂದುತ್ತಾನೆ. ವ್ಯಕ್ತಿಯಲ್ಲಿ ಮೂಡುವ ಆಧ್ಯಾತ್ಮಿಕ